ಇ) ವಿದ್ಯಾ ಮಂತ್ರಿಗಳು ಈ ಬಗೆ ಈ ಹಿಂದೆ ಉತ್ತರ ಕೊಡುತ್ತಾ ಶಾಲೆ ಕಟ್ಟಡ ಕಟ್ಟಿಸುತ್ತೇವೆಂದು ಆಶ್ವಾಸನೆ ಕೊಟ್ಟದ್ದು ನಿಜವಲ್ಲವೇ ;

ಈ) ಹಾಗಿದ್ದಲ್ಲಿ ಸದರಿ ಆಶ್ವಾಸನೆಯನ್ನು ಈ ಸಾಲಿನಲ್ಲಾದರೂ ಈಡೇರಿಸಲಾಗುವುದೇ ?

ಶ್ರೀ ಬಿ. ರಾಚಯ್ಯ ಶಿಕ್ಷಣ ಮಂತ್ರಿಗಳು.--

ಅ) ಬಂದಿದೆ

ಆ) ಬಂದಿದೆ

ಇ) ನಿಜ

ಈ) 1984-85 ರಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು ಹೆಚ್ಚಿನ ಕೊಠಡಿಗಳ ನಿರ್ಮಾಣಕ್ಕೆ ಅಂದಾಜು ನಕ್ಷೆ ತಯಾರಿಸಲು ಹೇಳಿದ್ದು, ಅವು ಬಂದ ಕೂಡಲೇ ಪರಿಶೀಲಿಸಲಾಗುವುದು.

ಶ್ರೀ ಬಿ ಎಸ್. ಯಡಿಯೂರಪ್ಪ.--ಸ್ವಾಮಿ, ಕಳೆದ 6 ತಿಂಗಳ ಹಿಂದೆಯೇ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಇದು ಪ್ರೈಮರಿ ಸ್ಕೂಲ್ ನೆಗ್ಲೆಕ್ಟ್ ಮಾಡಬಹುದು. ಇದು ಹೈಸ್ಕೂಲು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಏನೂ ಇಲ್ಲ ಆದರೆ ನಮ್ಮ ಶಿಕಾರಿಪುರದಲ್ಲಿ ಸರ್ಕಾರಿ ಜೂನಿಯರ್ ಕಾಲೇಜಿನ ಅನೇಕ ಕೊಠಡಿಗಳಿಗೆ ಕಿಟಕಿ ಬಾಗಿಲುಗಳು ಇಲ್ಲವೆಂಬ ಅಂಶವನ್ನು ತಾವು ಒಪ್ಪಿಕೊಂಡಿದ್ದೀರಿ ಈ ಕಟ್ಟಡ ಬಹಳ ದುಸ್ಥಿತಿಯಲ್ಲಿರುವುದರಿಂದ ಶಾಲಾ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ತಾವು ಹಿಂದೆ ಹೇಳಿದ್ದೀರಿ. ಈಗ ಈ ಕಟ್ಟಡ ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಕಳೆದ 20 ವರ್ಷದಿಂದಲೂ ಇದಕ್ಕೆ ರಿಪೇರಿಯೇ ಆಗಿಲ್ಲ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜನ್ನು ಕಂಬೈಂಡ್ ಮಾಡಿ ಕಟ್ಟಿಸಿದೆ. ಆದ್ದರಿಂದ ಈ ವರ್ಷದಲ್ಲಾದರೂ ಹೆಚ್ಚಿನ ಕೊಠಡಿಗಳನ್ನು ಕಟ್ಟಿಸಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ ರಾಚಯ್ಯ --ಹೊಸದಾಗಿ ಕಟ್ಟಿಸುವುದಕ್ಕೆ ಲೋಕೋಪಯೋಗಿ ಇಲಾಖೆಯವರಿಗೆ ತಾ: 11-10-83 ಹಾಗೂ 28-11-83 ರಲ್ಲಿ ಪತ್ರವನ್ನು ಬರೆದು ಈ ಕಟ್ಟಡಕ್ಕೆ ಬೇಕಾದ ಅಂದಾಜು ಮತ್ತು ನಕ್ಷೆಯನ್ನು ತಯಾರಿಸಿ ಕಳುಹಿಸಬೇಕೆಂದು ಕೇಳಿದ್ದೇವೆ. ಅವರು ಅಂದಾಜು ಮತ್ತು ನಕ್ಷೆಯನ್ನು ತಯಾರಿಸಲು ಕಳುಹಿಸಿಕೊಟ್ಟ ತಕ್ಷಣ ಮಂಜೂರು ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.--ಅಂದಾಜು ಮತ್ತು ನಕ್ಷೆ ತಮಗೆ ಬರುವಂತೆ ನಾವು ವ್ಯವಸ್ಥೆ ಮಾಡುತ್ತೇವೆ. ಅದು ಬಂದ ಕೂಡಲೆ ಅಂದರೆ ಈ ವರ್ಷವೇ ಇದನ್ನು ಕಾರ್ಯಗತ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.--ಆಗಬಹುದು.

ಶ್ರೀ ಎ. ಲಕ್ಷ್ಮೀಸಾಗರ್:--ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

## ಬಾಯಿಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

## ವಿಷಯ.—ಶಿಕ್ಷಣ ವಿಷಯ ತರಭೇತಿ ಹೊಂದಿ ನಿರುದ್ಯೋಗಿಗಳಾಗಿರುವರು

261 (277) ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:--

ಅ) ರಾಜ್ಯಗಳಲ್ಲಿ ಶಿಕ್ಷಣ ತರಭೇತಿ ಹೊಂದಿ ನಿರುದ್ಯೋಗಿಗಳಾಗಿರುವವರ ಸಂಖ್ಯೆ ಎಷ್ಟು, ಜಿಲ್ಲಾವಾರು ವಿವರ ನೀಡಬೇಕಾಗಿ ವಿನಂತಿ ;

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಖಾಲಿಯಿರುವ ವಾರ್ಥಮಿಕ ಉಪಧ್ಯಾಯರ ಹುದ್ದೆಗಳ ಸಂಖ್ಯೆ ಎಷ್ಟು ;

ಇ) ಈ ನಿರುದ್ಯೋಗವನ್ನು ಪರಿಹರಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ.—ಮಾನ್ಯ (ಶಿಕ್ಷಣ ಸಚಿವರು)

ಅ) 25,363. ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) 13,861

ಇ) ಜಿಲ್ಲಾಮಟ್ಟದ ನೇಮಕಾತಿ ಸಮಿತಿಗಳನ್ನು ರಚಿಸಿದ್ದು, ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.